ಈಗ ದಿನಗೂಲಿಯ ಮೇಲೆ ಗ್ಯಾಂಗ್‌ಮನ್‌ಗಳನ್ನು ನೇಮಿಸಿಕೊಳ್ಳಲು ಸಂಪೂರ್ಣ ನಿಷೇಧವಿದೆ. ಆದಾಗ್ಯೂ ಲೋಕೋಪಯೋಗಿ ಇಲಾಖೆ ವಿಭಾಗಗಳಲ್ಲಿ ಅಗತ್ಯವಿರುವೆಡೆಯಲ್ಲಿ ತುಂಡುಗುತ್ತಿಗೆ ಆಧಾರದ ಮೇಲೆ ಗುತ್ತಿಗೆದಾರರ ಕಡೆಯಿಂದ ರಸ್ತೆಗಳ ನಿರ್ವಹಣೆಯನ್ನು ನಡೆಸಲಾಗುತ್ತಿದೆ.

2. ಶಿವಮೊಗ್ಗ ನಗರದ ತುಂಗಾ ದಡದಲ್ಲಿ ರಿವಿಟ್‌ಮೆಂಟ್ ಕಟ್ಟುವ ವಿಷಯವು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಈ ಸಲದ ಆಯವ್ಯಯದಲ್ಲಿ ಈ ಕೆಲಸವನ್ನು ತೆಗೆದುಕೊಂಡಿರುವುದಿಲ್ಲವೆಂದು ಸಣ್ಣ ನೀರಾವರಿ ಇಲಾಖೆಯು ತಿಳಿಸಿರುತ್ತದೆ.

3. ರಾಜ್ಯದ ಎಲ್ಲಾ ಸರ್ಕಾರಿ ನೌಕರರುಗಳಿಗೆ ವಸತಿ ಗೃಹ ಸೌಕರ್ಯ ಕಲ್ಪಿಸಲು ಸುಮಾರು 618.65 ಕೋಟಿ ರೂ.ಗಳ ಅಂದಾಜು ವೆಚ್ಚ ಆಗಬಹುದು.

ನಾಗಮಂಗಲ ತಾಲ್ಲೂಕಿನಲ್ಲಿ ನಬಾರ್ಡ್ ರಸ್ತೆಗಳು.

527(626)

ಶ್ರೀ ಚೆಲುವರಾಯಸ್ವಾಮಿ .ಎನ್.(ನಾಗಮಂಗಲ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ನಾಗಮಂಗಲ ತಾಲ್ಲೂಕಿನಲ್ಲಿ ನಬಾರ್ಡ್‌ನಲ್ಲಿ ಹಾಗೂ ಆರ್.ಡಿ.ಪಿ.ಐ. 6 ರಲ್ಲಿ ಮಂಜೂರಾತಿಯಾಗಿರುವ ರಸ್ತೆಗಳು ಯಾವುವು? ಇದುವರೆವಿಗೂ ಆದ ಪ್ರಗತಿ ಹಾಗೂ ವೆಚ್ಚ ಏನು?

2. ನಾಗಮಂಗಲ ತಾಲ್ಲೂಕಿನ ಕೇಂದ್ರ ಸ್ಥಾನದ ಮೂಲಕ ಹೋಗುವ ತುಮಕೂರು, ಮೈಸೂರು ರಸ್ತೆಯನ್ನು ಅಗಲಪಡಿಸುವ ಯೋಜನೆ ಹಾಕಿಕೊಳ್ಳಲಾಗಿದೆಯೆ: ಹಾಕಿಕೊಂಡಲ್ಲಿ ಯಾವಾಗ ಪ್ರಾರಂಭಿಸಲಾಗುವುದು:

3. ಶ್ರೀರಂಗಪಟ್ಟಣ ಬೀದರ್ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಸ್ತಾವನೆಯು ಯಾವ ಹಂತದಲ್ಲಿದೆ.

4. ನಬಾರ್ಡ್ ಯೋಜನೆ ಅಡಿಯಲ್ಲಿ ನಾಗಮಂಗಲ ತಾಲ್ಲೂಕಿನಲ್ಲಿ ಆರ್‌ಡಿಪಿವೈ 4 ಹಾಗೂ ಅದರ ಹಿಂದೆ ತಾಲ್ಲೂಕಿಗೆ ಮಂಜೂರಾಗಿರುವ ಕಾಮಗಾರಿಗಳು ಯಾವುವು? (ಅಂದಾಜು ಪಟ್ಟಿ ಹಾಗೂ ಇದರಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳ ಬಗ್ಗೆ

ಮಾಹಿತಿ ಒದಗಿಸುವುದು.)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

1. ನಾಗಮಂಗಲ ತಾಲ್ಲೂಕಿನಲ್ಲಿ ನಬಾರ್ಡ್ ಆರ್‌ಐಡಿಎಫ್ 6 ರಡಿ ಯಾವ ರಸ್ತೆ ಕಾಮಗಾರಿಗಳು ಮಂಜೂರಾಗಿರುವುದಿಲ್ಲ.

2. ನಾಗಮಂಗಲ ತಾಲ್ಲೂಕಿನ ಕೇಂದ್ರ ಸ್ಥಾನದ ಮೂಲಕ ಹಾದು ಹೋಗುವ ತುಮಕೂರು ಮೈಸೂರು ರಸ್ತೆ ಶ್ರೀರಂಗಪಟ್ಟಣ ಬೀದರ್ ರಸ್ತೆ ರಾಜ್ಯ ಹೆದ್ದಾರಿ 19 ಎಂಬುದಾಗಿ ನಾಮಾಂಕಿತಗೊಂಡಿದ್ದು ಈ ಭಾಗದ ರಸ್ತೆಯನ್ನು ಅಗಲ ಪಡಿಸುವ ಪ್ರಸ್ತಾವನೆ ಇರುವುದಿಲ್ಲ. ಆದರೆ ಚೀಣ್ಯದಿಂದ ನೆಲ್ಲಿಗೆರೆವರೆಗಿನ 30.96 ಕಿಮೀ ಭಾಗವನ್ನು ಬಲಗೊಳಿಸುವ ಕಾಮಗಾರಿಯನ್ನು ವಿಶ್ವಬ್ಯಾಂಕ್ ಯೋಜನೆಯಲ್ಲಿ ಪ್ರಸ್ತಾವಿಸಿದ್ದು ಅಧಿಸೂಚನೆಯನ್ನು ಏಪ್ರಿಲ್ 2002ರಲ್ಲಿ ನೀಡಲು ಹಾಗೂ ಕಾಮಗಾರಿಯನ್ನು ಸೆಪ್ಟೆಂಬರ್ 2002ಕ್ಕೆ ಪ್ರಾರಂಭಿಸಲು ಯೋಜಿಸಲಾಗುವುದು.

3. ಸದರಿ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸುವ ಪ್ರಸ್ತಾವನೆಯನ್ನು ಕೇಂದ್ರ ಭೂ ಸಾರಿಗೆ ಸಚಿವಾಲಯಕ್ಕೆ ಈಗಾಗಲೇ (1988ರಿಂದಲೂ) ಸಲ್ಲಿಸಲಾಗಿದೆ. ಸದರಿ ಪ್ರಸ್ತಾವನೆಗೆ ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರೆಯಬೇಕಾಗಿದೆ.

4. ನಾಗಮಂಗಲ ತಾಲ್ಲೂಕಿನಲ್ಲಿ ನಬಾರ್ಡ್ ಆರ್‌ಐಡಿಎಫ್ 4ರಡಿ ಯಾವುದೇ ಕಾಮಗಾರಿ ಮಂಜೂರಾಗಿರುವುದಿಲ್ಲ.

ಆರ್‌ಐಡಿಎಫ್ 2 ಮತ್ತು 3 ರಡಿ ಮಂಜೂರಾಗಿರುವ ಕಾಮಗಾರಿಗಳ ವಿವರ ಕೆಳಕಂಡಂತಿದೆ.

ಕಾಮಗಾರಿಯ ಹೆಸರು	ಅಂದಾಜು ಮೊತ್ತ ಲಕ್ಷ ರೂ.ಗಳಲ್ಲಿ	ಪ್ರಸ್ತುತ ಹಂತ
ಆರ್. ಐ. ಡಿ. ಎಫ್ 2		
ಕೋಳಾಲ ತುರುವೇಕೆರೆ ದಬ್ಬೆಘಟ್ಟ ರಸ್ತೆ ಅಭಿವೃದ್ಧಿ	47.00	ಪೂರ್ಣಗೊಂಡಿದೆ

ನಾಗಮಂಗಲ ಮೈಲಾರ ಪಟ್ಟಣ ರಸ್ತೆ ಅಭಿವೃದ್ಧಿ	21.85	ಪೂರ್ಣಗೊಂಡಿದೆ
ಆರ್.ಐ.ಡಿ.ಎಫ್ 3		
ವಳಗೆರೆಪುರದಿಂದ ಚಿಕ್ಕಜಟಕ ರಸ್ತೆ ಅಭಿವೃದ್ಧಿ	12.00	ಪೂರ್ಣಗೊಂಡಿದೆ
ನಾಗಮಂಗಲ ಮೈಲಾರ ಪಟ್ಟಣ ರಸ್ತೆಯಿಂದ ರಾಷ್ಟ್ರೀಯ ಹೆದ್ದಾರಿ 48ನ್ನು ಅಂಕನಹಳ್ಳಿ ಮಾರ್ಗ ಸೇರುವ ರಸ್ತೆಯ ಅಭಿವೃದ್ಧಿ	39.50	ಪೂರ್ಣಗೊಂಡಿದೆ
ನಾಗಮಂಗಲ ಶ್ರವಣಬೆಳಗೊಳ ರಸ್ತೆಯಲ್ಲಿ ಅದ್ದಿಹಳಕ್ಕೆ ಅಡ್ಡಲಾಗಿ ಸೇತುವೆ ನಿರ್ಮಾಣ	54.55	ಸೇತುವೆ ಕಾಮಗಾರಿ ಪೂರ್ಣಗೊಂಡಿದ್ದು, ರಸ್ತೆ ಡಾಂಬರೀಕರಣ ಬಾಕಿ ಇರುತ್ತದೆ.

ನಾಗಮಂಗಲ ತಾಲ್ಲೂಕಿನ ದೇವಲಾಪುರ ಹೋಬಳಿಯ ರಸ್ತೆಗಳ ದುರಸ್ತಿ.

528(629)

ಶ್ರೀ ಚಲುವರಾಯ ಸ್ವಾಮಿ.ಎನ್.(ನಾಗಮಂಗಲ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ನಾಗಮಂಗಲ ತಾಲ್ಲೂಕಿನಲ್ಲಿ ದೇವಲಾಪುರ ಹೋಬಳಿಯಲ್ಲಿ ಕೆಲವು ಗ್ರಾಮಗಳು ಕಬ್ಬು ಬೆಳೆಗಾರರ ಪ್ರದೇಶವಾಗಿದ್ದು, ಬೆಳೆದ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಸಾಗಿಸುವ ರಸ್ತೆಗಳು ಬಹಳ ದುರಸ್ತಿಯಲ್ಲಿದ್ದು, ಇವುಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಯಾವುದಾದರೂ ಕ್ರಮ ಕೈಗೊಂಡಿದೆಯೇ; ಕೈಗೊಳ್ಳದಿದ್ದಲ್ಲಿ ಈಗಲಾದರೂ ರಸ್ತೆ ಅಭಿವೃದ್ಧಿಪಡಿಸಲಾಗುವುದೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ನಾಗಮಂಗಲ ತಾಲ್ಲೂಕಿನಲ್ಲಿ ದೇವಲಾಪುರ ಹೋಬಳಿಯ ಕೆಲವು ಗ್ರಾಮಗಳ